ಇಂದು ದಿನಾಂಕಃ 07.08.2019 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**ಪಾಟೀ ಸವಾಲುಃ** ವಾದಿಯ ಪರ ಶ್ರೀ ಕೆ ಬಿ ಬಿ ವಕೀಲರಿಂದಃ

1. ನನ್ನ ತಂದೆಗೆ 3 ಜನ ಅಣ್ಣತಮ್ಮಂದಿರು ಅವರುಗಳೆಂದರೆ ನಿಂಗಪ್ಪ , ಚಿಕ್ಕಪ್ಪ ಮತ್ತು ಶಿವಪ್ಪ. ನನ್ನ ತಂದೆಯ ತಾಯಿಯ ಹೆಸರು ಕರಿಯಮ್ಮ ತಳವಾರ. ದಾವಾ ಆಸ್ತಿಯು ನನ್ನ ತಂದಗೆ ಹೇಗೆ ಬಂತು ಎಂಬ ಪ್ರಶ್ನೆಗೆ ಸಾಕ್ಷಿಯು ನನ್ನ ಅಜ್ಜಿ ಕರಿಯಮ್ಮ , ನನ್ನ ದೊಡ್ಡಪ್ಪ, ನನ್ನ ತಂದೆ ಮತ್ತು ಚಿಕ್ಕಪ್ಪ ಒಟ್ಟಿಗೆ ಖರೀದಿ ಹಿಡಿದಿರೂತ್ತಾರೆ ಎಂದು ನುಡಿಯುತ್ತಾರೆ. 1966 ರ ನೇ ಇಸ್ವಿಯಲ್ಲಿ ಖರೀದಿಗೆ ಹಿಡಿದಿರುತ್ತಾರೆ.

2. ನಾವು ಮೂಲತಹ ತೋಟಗಂಟ್ಟಿ ಗ್ರಾಮದಲ್ಲಿ ವಾಸವಿದ್ದು ನಂತರ ನನ್ನ ತಾಯಿ ಯ ತವರುಮನೆ ನಾಗವಂದ ಗ್ರಾಮದಲ್ಲಿ ವಾಸವಿದ್ದೇವೆ. ನಾವು ತೋಟಗಂಟಿ ಗ್ರಾಮದಲ್ಲಿ ವಾಸವಿರುವುದಕ್ಕೆ ಯಾವುದೇ ದಾಖಲೆಗಳನ್ನು ಹಾಜರು ಪಡಿಸಿಲ್ಲ. ನಾನು ಮತ್ತು ನನ್ನ ಸಹೋದ-ಸೋದರಿಯರು ನಾಗವಂದ ಗ್ರಾಮದಲ್ಲಿ ವಿಧ್ಯಾಭ್ಯಾಸ ಮಾಡಿದ್ದೇವೆ. ನಾವು 1 ನೇ ತರಗತಿಯಿಂದಲೂ ನಾಗವಂದ ಗ್ರಾಮದಲ್ಲಿಯೇ ವಿಧ್ಯಾಭ್ಯಾಸ ಮಾಡಿದ್ದೇವೆ.

3. ದಾವಾ ಆಸ್ತಿಯನ್ನು ನಾವೇ ವಹಿವಾಟನ್ನು ಮಾಡುತ್ತಿರುತ್ತೇವೆ. ನಾವು ವಹಿವಾಟು ಮಾಡುತ್ತಿರುವುದಕ್ಕೆ ಸಂಬಂಧಿಸಿದಂತೆ ಯಾವುದೇ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ. ನನ್ನ ತಂದೆ ಚಿಕ್ಕಪ್ಪ ನಾಗವಂದ ಗ್ರಾಮದಲ್ಲಿ ವಾಸವಿದ್ದರು. ನನ್ನತಂದೆ ನಾಗವಂದ ಗ್ರಾಮದಲ್ಲಿ ವಾಸವಿದ್ದರು ಎಂದು ತೋರಿಸಲು ಯಾವುದೇ ಪಡಿತರಿ ಚೀಟಿಯನ್ನು ಹಾಜರು ಪಡಿಸಿರುವುದಿಲ್ಲ. ನನ್ನ ತಂದೆ ನಾಗವಂದ ಗ್ರಾಮದಲ್ಲಿ ವಾಸವಿಲ್ಲದಿದ್ದರು ವಾಸವಿದ್ದಾರೆ ಎಂದು ಸುಳ್ಳು ಹೇಳತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ತೋಟಗಂಟೆಯಲ್ಲಿ ಗ್ರಾಮದಲ್ಲಿ ಮರಣ ಹೊಂದಿರುತ್ತಾರೆ. ಅವರು ಮರಣ ಹೊಂದುವ ಪೂರ್ವದಲ್ಲಿ ತೋಟಗಂಟಿ ಗ್ರಾಮದಲ್ಲಿ ನಮ್ಮ ಜೊತೆ ಹಾಗೂ ನಮ್ಮ ಚಿಕ್ಕಪ್ಪನಾದ ಶಿವಪ್ಪನ ಮಗ ಜಯಪ್ಪರೊಂದಿಗೆ ವಾಸವಿದ್ದರು. ನಮ್ಮ ತಂದೆ ಸಾಯುವ ಮೊದಲು ನಮ್ಮ ಮತ್ತು ಅವರ ನಡುವಿನ ಸಂಬಂಧ ಚೆನ್ನಾಗಿತ್ತು. ನಮ್ಮ ಮತ್ತು ನನ್ನ ತಂದೆಯ ನಡುವೆ

ಸಂಬಂದಿವಿಲ್ಲದಿದ್ದರು ಚೆನ್ನಾಗಿ ಇಲ್ಲದಿದ್ದರು ಚೆನ್ನಾಗಿ ಇದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ನನ್ನ ತಂದೆಯ ವಿರುದ್ಧ ಇದಕ್ಕೂ ಪೂರ್ವದಲ್ಲಿ ಒಂದು ದಾವೆಯನ್ನು ದಾಖಲಿಸಿದ್ದೇವೆ ಎಂದರೆ ಸರಿ. ಅಸಲು ದಾವೆ ನಂ. 39/2002. ನನ್ನ ತಂದೆಯವರು ತೀರಿ ಹೋದ ದಿಃ 11-12-2002 ರಲ್ಲಿ ಮರಣ ಹೊಂದಿರುತ್ತಾರೆ.

5. ನನ್ನ ತಂದೆ ಸಾಯುು ಪೂರ್ವದಲ್ಲಿ ವಾದಿಯ ಪರವಾಗಿ ಮೃತ್ಯು ಪತ್ರವನ್ನು ಬರೆದುಕೊಟ್ಟಿದ್ದರು ಎಂಬ ಮಾಹಿತಿ ಇದೆಯೋ ಅಥವಾ ಇಲ್ಲವೋ ಎಂಬ ಪ್ರಶ್ನೇ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. 2001 ನೇ ಇಸ್ವಿಯಲ್ಲಿ ವಾದಿಯ ಪರವಾಗಿ ನನ್ನ ತಂದೆ ನೋಂದಾಯಿತ ಮೃತ್ಯು ಪತ್ರ ವನ್ನು ಆತನ ತಂದೆಯನ್ನು ಅಲ್ಪಾಯಿ ಸಂರಕ್ಷಣದಾರರು ಎಂದು ನೇಮಿಸಿ ಬರೆದುಕೊಟ್ಟಿದ್ದರು ಎಂದರೆ ಸರಿಯಲ್ಲ. ಮೃತ್ಯು ಪತ್ರ ವನ್ನು ಬರೆದುಕೊಟ್ಟಾಗ ವಾದಿಗೆ 10 ವರ್ಷ ವಯಸ್ಸಾಗಿತ್ತು ಎಂದರೆ ನನಗೆ ಗೊತ್ತಿಲ್ಲ.

6. ನಾನು ಹಿಂದೆ ನಮ್ಮ ತಂದೆಯ ವಿರುದ್ಧ ಹೂಡಿದ್ದ ದಾವೆಯಲ್ಲಿ ನಮ್ಮ ವಿಳಾಸವನ್ನು ತೋಟಗಂಟಿ ಮತ್ತು ಹಾಲಿ ವಸ್ತಿ ನಾಗವಂದ ಎಂದು ಕೊಟ್ಟಿರುತ್ತೇನೆ. ಈ ದಾವೆಯಲ್ಲಿ ಬಂದಂತಹ ನೋಟಿಸ್ ನಾಗವಂದದ ವಿಳಾಸ ಹೊಂದಿದ್ದು ಅದು ನನಗೆ ಮುಟ್ಟಿರುತ್ತದೆ. ನಾನು ಮೇಲಿನಂತೆ ಮುಟ್ಟಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವುಗಳು ವಿನಾಕಾರಣ ಕಾಲವನ್ನು ವ್ಯಯ ಮಾಡಬೇಕು ಎಂಬ ಉದ್ದೇಶದಿಂದ ಮತ್ತು ವಾದಿಗೆ ತೊಂದರೆ ಕೊಡಬೇಕು ಎಂಬ ಉದ್ದೇಶದಿಂದ ನ್ಯಾಯಾಲಯದಿಂದ ಸಮನ್ಸ ಬಂದರು ಪತ್ರಿಕಾ ಪ್ರಕಟಣೆ ಆದ ನಂತ ಏಕ್ಷ ಪಕ್ಷಿಯ ಮಾಡುತ್ತಾರೆ ಎಂದು ತಿಳಿದು ಈ ದಾವೆಯಲ್ಲಿ ಹಾಜರು ಇರುತ್ತಾರೆ ಎಂದರೆ ಸಾಕ್ಷಿಯು ನಮಗೆ ಆ ಉದ್ದೆಶವಿಲ್ಲ ಎಂದು ನುಡಿಯುತ್ತಾರೆ.

7. ನಾವು ಸಲ್ಲಿಸಿದ ಅಸಲು ದಾವಾ ನಂ. 39/2002 ರಲ್ಲಿ ನನ್ನ ತಂದೆಯವರು ಹಾಜರಾಗಿ ತಕರಾರು ಸಲ್ಲಿಸಿರುತ್ತಾರೆ. ಸದರಿ ದಾವೆಯಲ್ಲಿ ನಾನು ಜಯಪ್ಪ ಎನ್ನುವವರನ್ನು ಪಕ್ಷಕಾರರನಾಗಿ ಸೇರಿಸಿದ್ದೆ. ಸಾಕ್ಷಿಯು ಮುಂದುವರೆದು ನನ್ನ ತಂದೆ ತೀರಿಹೋಗಿದ್ದರಿಂದ ಆತನನ್ನು ನಂತರ ಸೇರಿಸಿರುತ್ತೇವೆ ಎಂದು ನುಡಿಯುತ್ತಾರೆ. ಸದರಿ ಜಯಪ್ಪನನ್ನು ಯಾವ ಕಾರಣಕ್ಕೆ ಪಕ್ಷಕಾರರನ್ನಾಗಿ ಮಾಡಲಾಯಿತು ಎಂಬುವ ಪ್ರಶ್ನೆಗೆ ಸಾಕ್ಷಿಯು ನನ್ನ ತಂದೆಗೆ ಚಿತಾವಣೆ ಮಾಡಿ ಖರೀದಿ ಮಾಡಿಕೊಂಡಿದ್ದರಿಂದ ಆತನನ್ನು ಪಕ್ಷಕಾರರನ್ನಾಗಿ ಸೇರಿಸಿದ್ದೇವೆ ಎಂದು ನುಡಿಯುತ್ತಾರೆ. ನನ್ನ ತಂದೆಗೆ ಮೋಸ ಮಾಡಿ ಜಯಪ್ಪನವರು ಖರೀದಿ ಪತ್ರ ವನ್ನು

ಬರೆಸಿಕೊಂಡಿರುತ್ತಾರೆ. ಸದರಿ ಖರೀದಿ ಪತ್ರವು ದಿಃ 07-06-2002 ರಲ್ಲಿ ಆಗಿರುತ್ತದೆ. ನನಗೆ ಖರೀದಿ ಮಾಡಿದ ವಿಷಯ  ಯಾವಾಗ ಗೊತ್ತಾಯಿತು ಎಂಬ ಪ್ರಶ್ನೆಗೆ ನನಗೆ ಖರೀದಿಯ ಮಾಹಿತಿ ಇರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಜಯಪ್ಪನು ಅಸಲು ದಾವಾ ನಂ. 39/2 ರಲ್ಲಿ ತನ್ನ ತಕರಾರನ್ನು ಸಲ್ಲಿಸಿದ್ದನು. ಜಯಪ್ಪನ ಯಾವುದೇ ತಕರಾರನ್ನು ಸಲ್ಲಿಸಿದಿದ್ದರು ತಕರಾರನ್ನು ಸಲ್ಲಿಸಿದ್ದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ದಾವೆಯ ಏಕಪಕ್ಷಿಯಾವಾಗಿ ನನ್ನ ಪರವಾಗಿ ಡಿಕ್ರಿಯಾಗಿದೆ ಎಂದರೆ ಸರಿಯಲ್ಲ.

(ಪಾಟೀ ಸವಾಲಿಗೆ ವಕೀಲರು ಸಮಯಾವಕಾಶ ಕೋರಿದ್ದು, ಪಾಟೀ ಸವಾಲನ್ನು ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

Sd/-xxxx

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,

ಹಿರೇಕೆರೂರು.